## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಚಂದ್ರಶೇಖರ ರೆಡ್ಡಿ, ಸದಸ್ಯರು, ಹಿರೇಬಿದನೂರು ಗ್ರಾಮ ಪಂಚಾಯಿತಿ, ಗೌರಿಬಿದನೂರು ತಾಲ್ಲೂಕು, ಗ್ರಾಮ ಪಂಚಾಯಿತಿ, ಚಿಕ್ಕಬಳ್ಳಾಪುರ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43-ಎ ರನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1. ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ಜಿಲ್ಲೆ ರವರ ಪತ್ರ ಸಂಖ್ಯೆ :ಜಿಪಂಚಿ/ಆಡಳಿತ/ಗ್ರಾ.ಪಂ.ಸ/ವಿ.ಶಿ.ಕ್ರ/ಸಿ.ಆರ್/2016-17 ದಿನಾಂಕ:30-11-2016.
2. ಸರ್ಕಾರದ ಇದೇ ಸಮಸಂಖ್ಯೆಯ ದಿನಾಂಕ:21-01-2017ರ ಕಾರಣ ಕೇಳುವ ನೋಟೀಸು.
3. ಶ್ರೀ ಚಂದ್ರಶೇಖರರೆಡ್ಡಿ, ಸದಸ್ಯರು, ಹಿರೇಬಿದನೂರು ಗ್ರಾಮ ಪಂಚಾಯಿತಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರ ದಿನಾಂಕ:14-03-2017ರ ಲಿಖಿತ ಹೇಳಿಕೆ.
4. ಸರ್ಕಾರದ ಸಮಸಂಖ್ಯೆಯ ವಿಚಾರಣಾ ನೋಟೀಸ್, ದಿನಾಂಕ 07.07.2017 ಮತ್ತು 26-07-2017.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಗೌರಿಬಿದನೂರು ರವರ ಪತ್ರ ಸಂಖ್ಯೆ: ತಾಪಂಗೌ/ಕಾ.ನಿ.ಅ/ಸ್ಥ.ವ/ಸಿ.ಆರ್/3/2017-18 ದಿನಾಂಕ:19-08-2017.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ದಿನಾಂಕ:30-11-2016ರ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ರವರ ಪ್ರಸ್ತಾವನೆಯಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತಾರೆ.

ಶ್ರೀ ಆರ್ ನರಸಿಂಹರೆಡ್ಡಿ ಮತ್ತು ರಘುನಾಥರೆಡ್ಡಿ, ಮೇಲಿನ ಕುರುಬರಹಳ್ಳಿ ಗ್ರಾಮ, ಹಿರೇಬಿದನೂರು ಗ್ರಾಮ ಪಂಚಾಯಿತಿ, ಗೌರಿಬಿದನೂರು ತಾಲ್ಲೂಕು ಇವರು ಜಿಲ್ಲಾ ಪಂಚಾಯತಿ ಕಛೇರಿಗೆ ಮನವಿ ಸಲ್ಲಿಸಿ, ಹಿರೇಬಿದನೂರು ಗ್ರಾಮ ಪಂಚಾಯಿತಿ ವಿವಾದಿತ ಸ್ವತ್ತಿನಲ್ಲಿ ಅನಧಿಕೃತವಾಗಿ ಖಾತೆ ಸಂಖ್ಯೆ:83/ಸಿಡಿ, 65/ಎ,ಬಿ ಸ್ವತ್ತಿನಲ್ಲಿ ಗ್ರಾಮ ಪಂಚಾಯಿತಿ ಸದಸ್ಯರು ಪ್ರವೇಶಿಸಿ ಅಕ್ರಮವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವ ಕುರಿತು ಸದಸ್ಯರಾದ ಶ್ರೀ ಚಂದ್ರಶೇಖರರೆಡ್ಡಿ ರವರ ಸದಸ್ಯತ್ವವನ್ನು ಅನರ್ಹಗೊಳಿಸಲು ಕೋರಿದ್ದು, ಶ್ರೀ ಚಂದ್ರಶೇಖರರೆಡ್ಡಿ, ಹಿರೇಬಿದನೂರು ಗ್ರಾಮ ಪಂಚಾಯತಿ ಸದಸ್ಯರು ಗಂಗರೆಡ್ಡಿ ಬಿನ್ ಚಿಕ್ಕಪ್ಪಯ್ಯ ರವರೊಂದಿಗೆ ಶಾಮೀಲಾಗಿ ವಿವಾದಿತ ಸ್ವತ್ತಿನಲ್ಲಿ ಅಕ್ರಮವಾಗಿ ಗ್ರಾಮ ಪಂಚಾಯತಿ ಸಿಮೆಂಟ್ ರಸ್ತೆಯಲ್ಲಿ ಯಾವುದೇ ಅನುಮತಿ ಇಲ್ಲದೇ ಗುಂಡಿ ತೋಡಿ ಶೌಚಾಲಯ ನಿರ್ಮಾಣಕ್ಕೆ ವಿವಾಧಿತ ಸ್ವತ್ತಿನಲ್ಲಿ ನ್ಯಾಯಾಲಯ ಆದೇಶವನ್ನು ಉಲ್ಲಂಘಿಸಿ ಅತಿಕ್ರಮಣ ಪ್ರವೇಶ ಮಾಡಿ ಶೌಚಾಲಯ ನಿರ್ಮಾಣ ಮಾಡಲು ಕುಮ್ಮಕ್ಕು ನೀಡಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43-ಎ ರನ್ವಯ ಶ್ರೀ ಚಂದ್ರಶೇಖರರೆಡ್ಡಿ ರವರ ಸದಸ್ಯತ್ವವನ್ನು ರದ್ದು ಪಡಿಸಲು ಮುಖ್ಯಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಶ್ರೀ ಚಂದ್ರಶೇಖರರೆಡ್ಡಿಯವರು ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಅತಿಕ್ರಮಣ ಪ್ರವೇಶ ಮಾಡಿ ಶೌಚಾಲಯ ನಿರ್ಮಾಣ ಮಾಡಲು ಕುಮ್ಮಕ್ಕು ನೀಡಿರುವುದು ಮೇಲ್ನೋಟಕ್ಕೆ ಕಂಡುಬರುವುದರಿಂದ, ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43(ಎ) ರನ್ವಯ ಗ್ರಾಮ ಪಂಚಾಯಿತಿ ಸದಸ್ಯತ್ವ ಸ್ಥಾನದಿಂದ ತೆಗೆದುಹಾಕುವ ಬಗ್ಗೆ ಶ್ರೀ ಚಂದ್ರಶೇಖರರೆಡ್ಡಿ, ಸದಸ್ಯರು, ಹಿರೇಬಿದನೂರು ಗ್ರಾಮ ಪಂಚಾಯಿತಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ರವರಿಗೆ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲಾಗಿದ್ದು, ಸದರಿ ಕಾರಣ ಕೇಳುವ ನೋಟೀಸಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ(3)ರಲ್ಲಿ ದಿನಾಂಕ:14-03-2017ರ ಲಿಖಿತ ಹೇಳಿಕೆಯನ್ನು ಈ ಕೆಳಕಂಡಂತೆ ನೀಡಿರುತ್ತಾರೆ.

"ಹಿರೇಬಿದನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೇಲಿನ ಕುರುಬರಹಳ್ಳಿ ಗ್ರಾಮದ ಆರ್.ಎ.ನರಸಿಂಹರೆಡ್ಡಿ ಮತ್ತು ರಘುನಾಥರೆಡ್ಡಿ ಬಿನ್ ಆರ್. ಆಂಜಿನಪ್ಪನವರು ಸಲ್ಲಿಸಿರುವ ದೂರಿನಲ್ಲಿ ಯಾವುದೇ ಸತ್ಯಾಂಶವಿರುವುದಿಲ್ಲ. ಸದರಿಯವರು ಅವರ ದೂರಿನಲ್ಲಿ ನಮೂದಿಸಿರುವಂತೆ ತಾನು ಯಾವುದೇ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿರುವುದಿಲ್ಲ. ಹಾಗೂ ಯಾರ ಮೇಲೂ ದಬ್ಬಾಳಿಕೆ ನಡೆಸಿರುವುದಿಲ್ಲ. ಯಾರೂ ಕುಮ್ಮಕ್ಕು ನೀಡಿರುವುದಿಲ್ಲ. ಈ ಆರೋಪಗಳಿಗೆ ದೂರುದಾರರು ಅನ್ವಯವಾಗುವ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಕೆ.ಸಿ. ಗಂಗರೆಡ್ಡಿ ಬಿನ್ ಚಿಕ್ಕಪ್ಪಯ್ಯ ಮೇಲಿನ ಕುರುಬರಹಳ್ಳಿ ಗ್ರಾಮದ ವಾಸಿ ಇವರು ಮೇಲಿನ ಕುರುಬರಹಳ್ಳಿ ಗ್ರಾಮದ ಮನೆಯ ಪಕ್ಕದಲ್ಲಿ ಇರುವ ಸಾರ್ವಜನಿಕರ ರಸ್ತೆಯಲ್ಲಿ ಶೌಚಾಲಯಕ್ಕಾಗಿ ಗುಂಡಿಯನ್ನು ನಿರ್ಮಿಸುತ್ತಿದ್ದರು. ಈ ವಿಚಾರ ತನಗೆ ತಿಳಿದು ಸ್ಥಳಕ್ಕೆ ಭೇಟಿಕೊಟ್ಟು ಪರಿಶೀಲಿಸಿರುತ್ತೇನೆ. ಸದರಿ ಕೆ.ಸಿ.ಗಂಗರೆಡ್ಡಿಯವರ ಕುಟುಂಬಕ್ಕೆ ಶೌಚಾಲಯ ಇರುವುದಿಲ್ಲ. ಇವರ ಮನೆಯಲ್ಲಿ 4 ಜನ ಹೆಣ್ಣು ಮಕ್ಕಳಿರುತ್ತಾರೆ. ಆದ್ದರಿಂದ ಸಾರ್ವಜನಿಕ ರಸ್ತೆಯಲ್ಲಿ ಗುಂಡಿಯನ್ನು ನಿರ್ಮಿಸಿ ನಂತರ ಸದರಿ ಗುಂಡಿಯನ್ನು ಸುಸಜ್ಜಿತವಾಗಿ ಮುಚ್ಚಿ ರಸ್ತೆಯನ್ನು ಯಥಾವತ್ತಾಗಿ ನಿರ್ಮಿಸಿರುತ್ತಾರೆ. ಇದರಿಂದ ಸಾರ್ವಜನಿಕರಿಗೆ ಯಾವುದೇ ಉಪದ್ರವ ಉಂಟಾಗಿರುವುದಿಲ್ಲ.

ಸರ್ಕಾರದ ಆರೋಪ ನೋಟೀಸಿನಲ್ಲಿ ತಿಳಿಸಿರುವಂತೆ ಗೌರಿಬಿದನೂರು ಮಾನ್ಯ ಹೆಚ್ಚುವರಿ ಕಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಸಲುದಾವೆ ಸಂಖ್ಯೆ 85/2006ರ ಪ್ರಕರಣ ದೂರುದಾರರಾದ ರಘುನಾಥರೆಡ್ಡಿ ಮತ್ತು ಇವರ ಸಹೋದರರುಗಳು ಮತ್ತು ಕೆ.ಸಿ. ಗಂಗರೆಡ್ಡಿ ರವರುಗಳ ನಡುವೆ ಪ್ರಕರಣ ಬಾಕಿ ಇದ್ದು, ಸದರಿ ಪ್ರಕರಣದಲ್ಲಿ ತಾನು ಯಾವುದೇ ಪಕ್ಷಗಾರನಾಗಿರುವುದಿಲ್ಲ ಮತ್ತು ಮಾನ್ಯ ನ್ಯಾಯಾಲಯವು ತನಗೆ ಯಾವುದೇ ನಿರ್ದೇಶನವನ್ನು ನೀಡಿರುವುದಿಲ್ಲ. ಗಂಗರೆಡ್ಡಿಯವರು ನಿರ್ಮಿಸಿರುವ ಶೌಚಾಲಯವು ಸಾರ್ವಜನಿಕ ರಸ್ತೆಯಲ್ಲಿರುತ್ತದೆ. ಈ ರಸ್ತೆಯು ಅಸಲು ದಾವೆ ಸಂಖ್ಯೆ:25/2006ರ ದಾವಾ ಸ್ವತ್ತು ಆಗಿರುವುದಿಲ್ಲ. ಆದ್ದರಿಂದ ಕೆ.ಸಿ.ಗಂಗರೆಡ್ಡಿಯವರಾಗಲಿ ತಾನಾಗಲೀ ನ್ಯಾಯಾಲಯದ ಯಾವುದೇ ಆದೇಶ ಉಲ್ಲಂಘಿಸಿರುವುದಿಲ್ಲ" ಎಂದು ತಿಳಿಸಿರುತ್ತಾರೆ.

ಮೇಲೆ ಓದಲಾದ (4) ರನ್ವಯ ಶ್ರೀ ಚಂದ್ರಶೇಖರರೆಡ್ಡಿ, ಸದಸ್ಯರು, ಹಿರೇಬಿದನೂರು ಗ್ರಾಮ ಪಂಚಾಯಿತಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ನ್ಯಾಯಾಲಯದಲ್ಲಿ ವಿಚಾರಣೆ ಕರೆಯಲಾಗಿ ದಿನಾಂಕ 24-04-2017 ರಂದು ಜರುಗಿದ ವಿಚಾರಣೆಯಲ್ಲಿ ಪ್ರಥಮ ದರ್ಜೆ ಸಹಾಯಕರು, ಜಿಲ್ಲಾ ಪಂಚಾಯತಿ ಚಿಕ್ಕಬಳ್ಳಾಪುರ ಜಿಲ್ಲೆ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಗೌರಿಬಿದನೂರು, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಿರೇಬಿದನೂರು ಗ್ರಾಮ ಪಂಚಾಯತಿ ಹಾಗೂ ಆಪಾದಿತ ಸದಸ್ಯರು ಹಾಜರಾಗಿರುತ್ತಾರೆ. ಕೆ.ಸಿ. ಗಂಗರೆಡ್ಡಿಯವರ ಕುಟುಂಬಕ್ಕೆ ಶೌಚಾಲಯ ಇರುವುದಿಲ್ಲ. ಇವರ ಮನೆಯಲ್ಲಿ 4 ಜನ ಹೆಣ್ಣುಮಕ್ಕಳಿರುತ್ತಾರೆ. ಆದ್ದರಿಂದ ಸಾರ್ವಜನಿಕ ರಸ್ತೆಯಲ್ಲಿ ಗುಂಡಿಯನ್ನು ನಿರ್ಮಿಸಿ ನಂತರ ಸದರಿ ಗುಂಡಿಯನ್ನು ಸುಸಜ್ಜಿತವಾಗಿ ಮುಚ್ಚಿ ರಸ್ತೆಯನ್ನು ಯಥಾವತ್ತಾಗಿ ನಿರ್ಮಿಸಿರುತ್ತಾರೆ. ಇದರಿಂದ ಸಾರ್ವಜನಿಕರಿಗೆ ಯಾವುದೇ ಉಪದ್ರವ ಉಂಟಾಗಿರುವುದಿಲ್ಲ ಎಂದು ಶ್ರೀ ಚಂದ್ರಶೇಖರರೆಡ್ಡಿ ರವರು ತಿಳಿಸಿರುತ್ತಾರೆ.

ಸದರಿ ಜಾಗವನ್ನು ಪರಿಶೀಲಿಸಿ ಗುಂಡಿಯನ್ನು ಸುಸಜ್ಜಿತವಾಗಿ ಮುಚ್ಚಿ ರಸ್ತೆಯನ್ನು ಯಥಾವತ್ತಾಗಿ ನಿರ್ಮಿಸಿರುವ ವರದಿಯನ್ನು ಸಲ್ಲಿಸುವಂತೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಗೌರಿಬಿದನೂರು, ಇವರಿಗೆ ತಿಳಿಸಲಾಯಿತು. ದಿನಾಂಕ:19-08-2017 ರಂದು ನಡೆದ ವಿಚಾರಣೆಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಗೌರಿಬಿದನೂರು, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಿರೇಬಿದನೂರು ಗ್ರಾಮ ಪಂಚಾಯತಿ ಹಾಗೂ ಆಪಾದಿತ ಸದಸ್ಯರು ಹಾಜರಾಗಿರುತ್ತಾರೆ. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಗೌರಿಬಿದನೂರು ರವರು ಮೇಲೆ ಓದಲಾದ (5) ಪರಿಶೀಲನಾ ವರದಿಯಲ್ಲಿ ಗೌರಿಬಿದನೂರು ತಾಲ್ಲೂಕು, ಹಿರೇಬಿದನೂರು ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀ ಚಂದ್ರಶೇಖರರೆಡ್ಡಿ ರವರು ವಿವಾದಿತ ಸ್ವತ್ತಿನ ಕಟ್ಟಡಕ್ಕೆ ಸಂಬಂಧಿಸಿದಂತೆ ಸದಸ್ಯರಾದ ಚಂದ್ರಶೇಖರರೆಡ್ಡಿ ರವರ ನೇತೃತ್ವದಲ್ಲಿ ಈಗಾಗಲೇ ಶೌಚಾಲಯವನ್ನು ನಿರ್ಮಿಸಲಾಗಿರುತ್ತದೆ. ಆದರೆ ಸದರಿಯವರು ಶೌಚಾಲಯ ಗುಂಡಿಯನ್ನು ತೆಗೆದು ನಂತರ ಅದನ್ನು ಜಲ್ಲಿಯಿಂದ ಮುಚ್ಚಿರುವುದು ಸ್ಥಳ ತನಿಖೆ ಸಂದರ್ಭದಲ್ಲಿ

ಕಂಡುಬಂದಿರುತ್ತದೆ ಎಂದು ಫೋಟೋ ಸಮೇತ ದಾಖಲಾತಿಗಳೊಂದಿಗೆ ವರದಿಯನ್ನು ಸಲ್ಲಿಸಿರುತ್ತಾರೆ.

ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ರವರ ಪ್ರಸ್ತಾವನೆಗಳು, ಶ್ರೀ ಚಂದ್ರಶೇಖರರೆಡ್ಡಿ, ಸದಸ್ಯರು, ಹಿರೇಬಿದನೂರು ಗ್ರಾಮ ಪಂಚಾಯಿತಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರು ನೀಡಿರುವ ಲಿಖಿತ ಹೇಳಿಕೆ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಗೌರಿಬಿದನೂರು ರವರ ವಿಚಾರಣಾ ವರದಿ ಮತ್ತು ಫೋಟೋ ಸಮೇತ ದಾಖಲಾತಿಗಳನ್ನು ಸರ್ಕಾರವು ಪರಿಶೀಲಿಸಿದ್ದು, ಸಿ.ಸಿ. ರಸ್ತೆ ಪೂರ್ಣಗೊಳಿಸಿರುವುದು ಹಾಗೂ ಯಾವುದೇ ಅಡಚಣೆ ಇಲ್ಲದಿರುವುದು ಕಂಡುಬಂದಿದ್ದು ಶೌಚಾಲಯ ನಿರ್ಮಾಣ ಮಾಡಿರುವ ಹಿನ್ನಲೆಯಲ್ಲಿ ಶ್ರೀ ಚಂದ್ರಶೇಖರರೆಡ್ಡಿ, ಸದಸ್ಯರು, ಹಿರೇಬಿದನೂರು ಗ್ರಾಮ ಪಂಚಾಯಿತಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ಪ್ರಕರಣ 43(ಎ) ರಡಿ ಜರುಗಿಸಬೇಕಾದ ಕ್ರಮವನ್ನು ಕೈಬಿಡಲು ನಿರ್ಧರಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 53 ಗ್ರಾಪಂಅ 2017 ಬೆಂಗಳೂರು, ದಿನಾಂಕ: 16–10–2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಗೌರಿಬಿದನೂರು ವಿಚಾರಣಾ ವರದಿಯಲ್ಲಿ ಸಿ.ಸಿ.ರಸ್ತೆಯಲ್ಲಿ ಶೌಚಾಲಯ ಗುಂಡಿಯನ್ನು ತೆಗೆದು ನಂತರ ಅದನ್ನು ಜಲ್ಲಿಯಿಂದ ಮುಚ್ಚಿರುವುದು ಸ್ಥಳ ತನಿಖೆ ಸಂದರ್ಭದಲ್ಲಿ ಕಂಡುಬಂದಿರುತ್ತದೆ ಎಂದು ಫೋಟೋ ಸಮೇತ ದಾಖಲಾತಿಗಳೊಂದಿಗೆ ವರದಿ ಮಾಡಿರುವ ಹಿನ್ನೆಲೆಯಲ್ಲಿ ಶ್ರೀ ಚಂದ್ರಶೇಖರರೆಡ್ಡಿ, ಸದಸ್ಯರು, ಹಿರೇಬಿದನೂರು ಗ್ರಾಮ ಪಂಚಾಯಿತಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ಪ್ರಕರಣ 43(ಎ) ರಡಿ ಜರುಗಿಸಬೇಕಾಗ ಕ್ರಮವನ್ನು ಕೈಬಿಟ್ಟು ಸರ್ಕಾರವು ಆದೇಶಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

17/x/17

(ಮುಬಾರಕ್ ಅಹ್ಮದ್),
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ಜಿಲ್ಲೆ.
2. ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯಿತಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.
3. ಶ್ರೀ ಚಂದ್ರಶೇಖರರೆಡ್ಡಿ, ಸದಸ್ಯರು, ಹಿರೇಬಿದನೂರು ಗ್ರಾಮ ಪಂಚಾಯಿತಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.
4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹಿರೇಬಿದನೂರು ಗ್ರಾಮ ಪಂಚಾಯಿತಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ .
5. ಗಣಕ ಶಾಖೆ/ಕರ್ನಾಟಕ ವಿಕಾಸ
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

<u>ಪ್ರತಿಯನ್ನು ಮಾಹಿತಿಗಾಗಿ:</u>

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.